**PW- 1**

**ದಿನಾಂಕಃ 14-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಎಲ್ ವಿ ಡಿ ವಕೀಲರಿಂದಃ**

1. ದಿಃ 01-01-2021 ಕ್ಕೆ ನನ್ನ ಸಂಬಳ ರೂ. 27,887/- ಇತ್ತು ಎಂದರೆ ನಿಜ. ದಿಃ 01-02-2021 ಕ್ಕೆ ನನ್ನ ಸಂಬಳ ರೂ. 29,668/- ಇತ್ತು ಎಂದರೆ ನಿಜ. ನನ್ನ ಸಂಬಳ ಹೆಚ್ಚಿಗೆ ಆಗುತ್ತಾ ಹೋಗಿದೆ ಹೊರತು ಕಡಿಮೆ ಆಗಿಲ್ಲ ಎಂದರೆ ನಿಜ. ದಿಃ 01-02-2025 ನನ್ನ ಸಂಬಳ ರೂ.67,614/- ಪಡೆದಿರುತ್ತೇನೆ ಎಂದರೆ ನಿಜ. ನನಗೆ ಯಾವುದೇ ಸಂಬಳ ಕಡಿತ ಇಲ್ಲದೇ ಎಲ್ಲರಿಗೂ ಕೊಡುವ ರೀತಿಯಲ್ಲಿ ಪಡೆದಿರುತ್ತೇನೆ ಎಂದರೆ ನಿಜ.

2. ದಿಃ 18-03-2021 ರಿಂದ 04-07-2021 ರವರೆಗೆ ರಜೆ ಕೇಳಿದ್ದು ಅಷ್ಟು ದಿನ ಪರಿವರ್ತಿತ ರಜೆ ಮಂಜೂರು ಆಗಿದೆ ಎಂದರೆ ನಿಜ. ಸದರಿ ರಜೆಯಲ್ಲಿ ಕೂಡಾ ನನಗೆ ಸಂಬಳ ಕೊಟ್ಟಿರುತ್ತಾರೆ ಎಂದರೆ ನಿಜ. ನಾನು ನನ್ನ ವೈದ್ಯಕೀಯ ಬಿಲ್ಲು ಗಳ ಮೇಲೆ ಸರ್ಕಾರಕ್ಕೆ ಕೇಳಿಕೊಂಡಿಲ್ಲ. ನಾನು ಅದನ್ನು ಕೇಳಲು ಮತ್ತು ಕೊಡಲು ಯಾವುದೇ ತೊಂದರೆ ಇದ್ದಿರಲಿಲ್ಲ. ಸದರಿ ಬಿಲ್ಲುಗಳನ್ನು ನಾನು ಹಾಕಿದ್ದಲ್ಲಿ ಪ್ರತಿಶತದಲ್ಲಿ ಮರಳಿ ಕೊಡುತ್ತಾರೆ. ನಾನು ಹಾಕಿರುವ ಬಿಲ್ಲುಗಳು ನಿಜ ಪರಸ್ಥಿತಿಗೆ ವಿರುದ್ದವಾಗಿರುವ ಕಾರಣ ಮತ್ತು ಆ ದಾಖಲೆಗಳು ಸೂಕ್ತ ವಾಗಿರದ ಕಾರಣ ನಾನು ಉದ್ದೇಶಪೂರ್ವಕವಾಗಿ ಅವುಗಳನ್ನು ಸರ್ಕಾರಕ್ಕೆ ಮರಳಿಸಿಲ್ಲ ಎಂದರೆ ಸರಿಯಲ್ಲ. ನಾನು ಸೃಷ್ಟಿ ಮಾಡಿಕೊಂಡು ಬಿಲ್ಲು ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಕಿರುವ ಬಿಲ್ಲುಗಳಿಗೂ ಮತ್ತು ಈ ಪ್ರಕರಣಕ್ಕು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

3. ನನಗೆ ಯಾವುದೇ ಅಂಗನ್ಯೂನ್ಯತೆ ಆಗಿರಲಿಲ್ಲ ಆದಾಗ್ಯುಯು ಕೂಡಾ ನಾನು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯಲ್ಲಿ ನೂರಿತ ವೈದ್ಯರಿದ್ದು ಅವರು ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಡುತ್ತಿದ್ದರು ಸಹ ನಾನು ಉದ್ದೇಶಪೂರ್ವಕವಾಗಿ ಹೋಗಿಲ್ಲ ಎಂದರೆ ಸರಿಯಲ್ಲ. ನನಗೆ ಅಂಗನ್ಯೂನ್ಯತೆ ಇದೆ ಎಂದು ತೋರಿಸಲು ನಮ್ಮ ಸಂಸ್ಥೆಗೆ ನಾನು ಅರ್ಜಿ ಕೊಟ್ಟಿಲ್ಲ. ನಾನು ಮೊದಲು ಹೇಗೆ ಕೆಲಸ ಮಾಡುತ್ತಿದ್ದೆ ಅದೇ ರೀತಿ ಈಗ ಕೆಲಸ ಮಾಡುತ್ತಿದ್ದು ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನನಗೆ ಮಾನಸಿಕವಾಗಿ ಮತ್ತು ದೈಹೀಕವಾಗಿ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ಕುಟುಂಬ ನಿರ್ವಹಣೆಗೆ ನನಗೆ ಯಾವುದೇ ರೀತಿಯ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು

**PW- 1**

ಇರುವುದು ರಾಣೇಬೆನ್ನೂರಿನಲ್ಲಿ ನನ್ನ ಕೆಲಸ ಹಾವೇರಿಯಲ್ಲಿ ಇದೆ ನಾನು ಈಗಲೂ ದಿನಾ ಪ್ರಯಾಣ ಮಾಡಿ ಕೆಲಕ್ಕೆ ಹೋಗುತ್ತೇನೆ.

4. ನನಗೆ ಅಪಘಾತ ಆದ ನಂತರ ಮೊದಲಿನ ತರ ನಾನು ಪ್ರಯಾಣ ಮಾಡಿ ಕೆಲಸಕ್ಕೆ ಹೋಗುತ್ತೇನೆ ಎಂದರೆ ನಿಜ. ನನಗೆ ದಿನಾಲು ಪ್ರಯಾಣ ಬೇಳೆಸಿರುವುದರಿಂದ ಯಾವುದೇ ದೈಹಿಕ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನಗೆ ದೈಹೀಕ ವಾಗಿ ಯಾವುದೇ ತೊಂದರೆ ಇರದೆ ಇದ್ದರು ಸಹ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ